# ಒಂದು ಭೂಮಿ ಒಂದು ಮನೆ

ಹಂತ ೩ – ೬, ೭ & ೮

ತರಗತಿಗಳು – ೩, ೪ & ೫

ಚಟುವಟಿಕೆ ಪುಸ್ತಕ

WWF 50 YEARS IN INDIA

**ನಮಸ್ತೇ, ಒಂದು ಭೂಮಿ – ಒಂದು ಮನೆ ಕಾರ್ಯಕ್ರಮಕ್ಕೆ ನಿಮಗೆ ಸ್ವಾಗತ!**

ನಿಮಗೆ ಗೊತ್ತೇ, ನೀವಲ್ಲದೇ ನಿಮ್ಮ ಮನೆಯಲ್ಲಿ ಇತರ ಜೀವಿಗಳೂ ಕೂಡಾ ಬದುಕುತ್ತಿವೆಯೆಂದು? ಅವುಗಳಲ್ಲಿ ಕೆಲವು ನಮ್ಮ ಕಣ್ಣೆದುರೇ ಓಡಾಡುತ್ತಿರಬಹುದು ಆದರೆ ಕೆಲವು ನಮ್ಮ ಗುಪ್ತ ಸದಸ್ಯರಾಗಿರುತ್ತವೆ!
ನಮ್ಮ ಗ್ರಹ – ಭೂಮಿಯನ್ನು ನಾವು ಹಲವಾರು ಸಸ್ಯಗಳು ಹಾಗೂ ಪ್ರಾಣಿಗಳೊಂದಿಗೆ ಹಂಚಿಕೊಂಡು ಬದುಕುತ್ತಿದ್ದೇವೆ. ಹಾಗಾಗಿ ಅವುಗಳು ಕಾಡುಗಳಲ್ಲಿ ಇರಲಿ ಅಥವಾ ನಮ್ಮ ಮನೆಯಲ್ಲೇ ಇರಲಿ, ನಮ್ಮ ಸಂಪನ್ಮೂಲಗಳನ್ನು ಜಾಗ್ರತೆಯಾಗಿ ಬಳಸುವ ಮೂಲಕ ನಾವು ಅವುಗಳನ್ನು ಗೌರವಿಸಬೇಕು.
ಶಾಶ್ವತವಾದ ಸಂತೋಷದಾಯಕ ಹಾಗೂ ಆರೋಗ್ಯಕರ ಗ್ರಹಕ್ಕಾಗಿ ಸಸ್ಯಗಳು, ಪ್ರಾಣಿಗಳು ಮತ್ತು ಮಾನವರು ಒಟ್ಟಾಗಿ ಅಭಿವೃದ್ಧಿ ಹೊಂದಬೇಕು.
ನಾವು ಪ್ರಕೃತಿಯ ಬಗ್ಗೆ ತಿಳಿದುಕೊಳ್ಳುವುದು, ಹಸಿರು ಅಭ್ಯಾಸಗಳನ್ನು ಅಳವಡಿಸಿಕೊಳ್ಳುವುದು ಮತ್ತು ಪರಿಸರ–ಸ್ನೇಹೀ ಮನೆಗಳನ್ನು ರಚಿಸುವಂಥಾ ಕೆಲವು ಕ್ರಮಗಳನ್ನು ಕೈಗೊಂಡರೆ ಮಾತ್ರ ಇವೆಲ್ಲಾ

ಹಾಗಾಗಿ, ಪ್ರಕೃತಿಯನ್ನು ಶೋಧಿಸುತ್ತಾ ನಿಮ್ಮ ಸಮಯವನ್ನು ಉತ್ತಮವಾಗಿ ಕಳೆಯಲು ಇಂದು ನಾವು ನಿಮಗಾಗಿ ಒಂದು ಭೂಮಿ – ಒಂದು ಮನೆ ಕಾರ್ಯಕ್ರಮವನ್ನು ಪರಿಚಯಿಸುತ್ತಿದ್ದೇವೆ. ಇದರಲ್ಲಿ ಮೂರು ಹಂತಗಳಿವೆ:



## ಹಂತ ೧ ಅನ್ವೇಷಿಸಿ ಮತ್ತು ಕಂಡು ಹಿಡಿಯಿರಿ



## ಹಂತ ೨ – ನೋಡಿ ಮತ್ತು ಕಲಿಯಿರಿ



## ಹಂತ ೩ – ಚರ್ಚಿಸಿ ಮತ್ತು ಮಾಡಿ

## ಹೆತ್ತವರಿಗೆ/ಪೋಷಕರಿಗೆ ಸೂಚನೆ

“ಒಂದು ಭೂಮಿ – ಒಂದು ಮನೆ", ಇದು, ವಾರಕ್ಕೆ ಕೇವಲ ೩೦ ನಿಮಿಷಗಳ ಸಮಯ ತೆಗೆದುಕೊಳ್ಳುವ ಚಟುವಟಿಕೆಗಳನ್ನೊಳಗೊಂಡ, ಹತ್ತು ವಾರಗಳ ಕಿರು ಕಾರ್ಯಕ್ರಮ.

- ಕಾರ್ಯಹಾಳೆಗಳನ್ನು ಮುದ್ರಿಸಬಹುದು ಅಥವಾ ಒಂದು ಖಾಲಿ ಕಾಗದ/ಟಿಪ್ಪಣಿ ಪುಸ್ತಕದಲ್ಲಿ ಬರೆಯಬಹುದು.

- ಎಲ್ಲಾ ಚಟುವಟಿಕೆಗಳ ಸಮಯದಲ್ಲೂ ನಿಮ್ಮ ಮಕ್ಕಳೊಂದಿಗೆ ಇದ್ದು ಬೆಂಬಲಿಸಿ. ಕಾರ್ಯಹಾಳೆಗಳನ್ನು ಸಂಪೂರ್ಣಗೊಳಿಸಲು ಅವರಿಗೆ ಸಹಾಯ ಮಾಡಿ.

- ಪ್ರತಿಯೊಂದು ಚಟುವಟಿಕೆಯಲ್ಲಿಯೂ ಬೆಂಬಲವಾಗಿ, ಶಿಕ್ಷಕರಿಗೆ ವಾಟ್ಸ್ಆಪ್ ಮೂಲಕ ಕಳುಹಿಸಲಾಗುವ ಅಥವಾ ಪ್ರತಿಯೊಂದು ಕಾರ್ಯಹಾಳೆಯೊಂದಿಗೆ ನೀಡಲಾಗುವ ಸಂಪರ್ಕ ಕೊಂಡಿ (ಲಿಂಕ್)ಯ ಮೂಲಕ ಡೌನ್‌ಲೋಡ್ ಮಾಡಬಹುದಾದ ಒಂದು ವೀಡಿಯೋ / ದೃಶ್ಯಚಿತ್ರವಿರುತ್ತದೆ.

- ಯಾವಾಗಲೂ ಅವರ ಚಿಕ್ಕ ಯಶಸ್ಸನ್ನೂ ಪ್ರೋತ್ಸಾಹಿಸಿ ಆನಂದಿಸಿ ಮತ್ತು ಉತ್ತಮ ಕೌಟುಂಬಿಕ ಸಮಯವನ್ನು ಒಂದಾಗಿ ಕಳೆಯಿರಿ.

# ಹಂತ ೩
# ಚರ್ಚಿಸಿ ಮತ್ತು ಮಾಡಿ

ನೀವು ಚೆನ್ನಾಗಿ ಮಾಡುತ್ತಿದ್ದೀರಿ, ನಿಲ್ಲಿಸಬೇಡಿ. ಈಗ ‘ ಒಂದು ಭೂಮಿ, ಒಂದು ಮನೆ ’ ಯ ಕೊನೆಯ ಹಂತವನ್ನು
ಕೈಗೊಳ್ಳಬೇಕಾದ ಸಮಯ. ಇದರಲ್ಲಿ ೪ ಕಾರ್ಯಹಾಳೆಗಳು ಮತ್ತು ೨ ವೀಡಿಯೋಗಳಿವೆ.

## ಪರಿವಿಡಿ

**ವೀಡಿಯೋ ವಿ೩ಎ: ಬಿತ್ತಿ, ಉಳಿಸಿ, ಬೆಳೆಸಿ!**
ಮನೆಯಲ್ಲಿ ಗಿಡ ಬೆಳೆಸುವುದನ್ನು ಕಲಿಯಿರಿ

**ಕಾರ್ಯಹಾಳೆ ಡಬ್ಲ್ಯೂ೩ಎ: ನನ್ನ ಪುಟ್ಟ ಕೈತೋಟ**
ಹಳೆಯ ಕುಂಡಗಳು ಮತ್ತು ಧಾರಕಗಳನ್ನು ಬಳಸಿ ಗಿಡವನ್ನು ಬೆಳೆಸಿ
(ಯಾವುದೇ ತರಕಾರಿ, ಹಣ್ಣು ಅಥವಾ ಗಿಡಮೂಲಿಕೆ).

**ವೀಡಿಯೋ ವಿ೩ಬಿ: ಕಸದ ಮಾತಾಡೋಣ!**
ಹೇಗೆ ಅತೀಕಡಿಮೆ ತ್ಯಾಜ್ಯ ಉಂಟು ಮಾಡುವುದು ಎಂದು ಕಲಿಯೋಣ, ಆ ಮೂಲಕ ಹಸಿರನ್ನು ಹೆಚ್ಚಿಸೋಣ.

**ಕಾರ್ಯಹಾಳೆ ಡಬ್ಲ್ಯೂ೩ಬಿ: ನಾನು ಜವಾಬ್ದಾರನಾಗಿರುತ್ತೇನೆ.**
ನಿಮ್ಮ ಮನೆಯಲ್ಲಿ ಉತ್ಪಾದನೆಯಾಗುವ ವಿವಿಧ ರೀತಿಯ ತ್ಯಾಜ್ಯಗಳ ಪಟ್ಟಿ ಮಾಡಿ. ಅವುಗಳನ್ನು ಒಣ ತ್ಯಾಜ್ಯ ಮತ್ತು ಹಸಿ ತ್ಯಾಜ್ಯ ಎಂದು ವಿಂಗಡಿಸಿ.

**ವೀಡಿಯೋ ವಿ೩ಸಿ: ಪ್ರಕೃತಿಯ ಮರುಸಂಸ್ಕರಣಾಕಾರರು**
ಗೊಬ್ಬರದ ಬಗ್ಗೆ ತಿಳಿದುಕೊಳ್ಳಿ ಮತ್ತು ಅದನ್ನು ನೀವು ಮನೆಯಲ್ಲಿ ಹೇಗೆ ಮಾಡಬಹುದೆಂದು ಕಲಿಯಿರಿ.

**ಕಾರ್ಯಹಾಳೆ ಡಬ್ಲ್ಯೂ೩ಸಿ: ನನ್ನ ಹಿತ್ತಲಿನಲ್ಲಿ ಚಮತ್ಕಾರ**
ಮನೆಯಲ್ಲಿ ಗೊಬ್ಬರದ ತಯಾರಿಕೆಯ ಮೂಲಕ ಚಮತ್ಕಾರ ಮಾಡಿ.

**ಕಾರ್ಯಹಾಳೆ ಡಬ್ಲ್ಯೂ೩ಡಿ: ನಮ್ಮ ಮನೆಯನ್ನು ಹಸಿರು ಮನೆಯಾಗಿಸೋಣ!**
ಮನೆಯವರ ಅಭ್ಯಾಸಗಳನ್ನು ಒಂದು ವಾರದವರೆಗೆ ಗಮನಿಸುತ್ತಿರಿ.

**ಮರುಮನನ ಮತ್ತು ಇನ್ನಷ್ಟು**
ನೀವು ಕಲಿತಿರುವುದನ್ನು ಮರುಪರಿಶೀಲಿಸಿ ಮತ್ತು ವರದಿ ಮಾಡಿ.

| ಹಸಿರು ಮನೆ ಸಂಕೇತವನ್ನು ತಯಾರಿಸಿ! | ಪ್ರತಿಜ್ಞೆಗೆ ಸಹಿ ಮಾಡಿ! |
|---|---|
| ನಿಮ್ಮದು ಈಗ ಹಸಿರು ಮನೆ ಎಂದು ಪ್ರದರ್ಶಿಸಲು, ಹಳೆಯ ವಸ್ತುಗಳಿಂದ ಒಂದು ಸಂಕೇತವನ್ನು ತಯಾರಿಸಿ ಮನೆಯ ಹೊರಗೆ ತೂಗುಹಾಕಿ. | ನೀವು ಯಾವಾಗಲೂ ಕುಟುಂಬ ಸಮೇತ ಮುಂದುವರಿಸುವ ವಿಷ ’ಯಗಳನ್ನು ಬರೆಯಿರಿ. ಸಹಿ ಮಾಡಿ ಅದನ್ನು ನಿಮ್ಮ ಮನೆಯಲ್ಲಿ ಒಂದೆಡೆ ಪ್ರದರ್ಶನಕ್ಕಿಡಿ. |

ಸುಸ್ಥಿರ ಅಭಿವೃದ್ಧಿ ಗುರಿಗಳನ್ನು (ಎಸ್‌ಡಿಜಿಗಳು) ಸಾಧಿಸಲು ಕೂಡಾ ಒಂದು ಭೂಮಿ – ಒಂದು ಮನೆ ಸಹಾಯ ಮಾಡುತ್ತದೆ.

ಹಂತ ೩ ಈ ಕೆಳಗಿನವುಗಳಿಗಾಗಿ ಇದೆ:

೩ ಉತ್ತಮ ಆರೋಗ್ಯ ಮತ್ತು ಸುರಕ್ಷೆ

೪ ಗುಣಮಟ್ಟದ ಶಿಕ್ಷಣ

೧೨ ಜವಾಬ್ದಾರಿಯುತ ಬಳಕೆ ಮತ್ತು ಉತ್ಪಾದನೆ

೧೩ ಹವಾಮಾನ ಪ್ರಕ್ರಿಯೆ

# ವೀಡಿಯೋ ವಿಭಾಗ

## ವೀಡಿಯೋದ ಸಮಯ

## ಬಿತ್ತಿ, ಉಳಿಸಿ, ಬೆಳೆಸಿ!

ನಿಮ್ಮ ಮನೆಯಲ್ಲಿ ಚಿಕ್ಕಪುಟ್ಟ ಹಣ್ಣುಗಳು, ತರಕಾರಿಗಳು ಮತ್ತು ಔಷಧೀಯ ಸಸ್ಯಗಳನ್ನು ಬೆಳೆಸುವುದು ಹೇಗೆಂದು ಈ ವೀಡಿಯೋದಿಂದ ಕಲಿತುಕೊಳ್ಳಿ.



ಕಾರ್ಯಹಾಳೆ

ಡಬ್ಲ್ಯೂಇಎ

# ನನ್ನ ಪುಟ್ಟ ಕೈತೋಟ

ಆರೋಗ್ಯಕರ ಕುಟುಂಬಕ್ಕೆ ಗುಣಮಟ್ಟದ ಆಹಾರ ಮಹತ್ವವಾಗುತ್ತದೆ.

ನಿಮ್ಮ ಆಹಾರವನ್ನು ನೀವೇ ಬೆಳೆಸಿದರೆ ನಮ್ಮ ಗ್ರಹದ ಆರೋಗ್ಯ ವರ್ಧಿಸಲು ಅದು ಸಹಾಯ ಮಾಡುತ್ತದೆ.

ನೀವು ಎಲ್ಲಿ ಬೇಕಾದರೂ ಒಂದು ಅಡುಗೆಮನೆ ಕೈತೋಟ ರಚಿಸಬಹುದು.

ತೆಂಗಿನಕಾಯಿ ಗೆರಟೆಯಲ್ಲಿ (ಚಿಪ್ಪಿನಲ್ಲಿ) ಅಥವಾ ಮೊಟ್ಟೆಯ ಚಿಪ್ಪಿನಲ್ಲಿ (ಸಿಪ್ಪೆಯಲ್ಲಿ) ಕೂಡಾ ನೀವು ಗಿಡಗಳನ್ನು ಬೆಳೆಸಬಹುದು!

ಕಡಿಮೆ ಆರೈಕೆಯ ಅಗತ್ಯವಿರುವ ಕಾಲೋಚಿತ (ಋತು ಆಧಾರಿತ) ಹಣ್ಣುಗಳು & ತರಕಾ-ರಿಗಳು ಅತ್ಯಂತ ವೇಗವಾಗಿ ಬೆಳೆಯುತ್ತವೆ.

ಹಂತಗಳನ್ನು ಸಂಪೂರ್ಣಗೊಳಿಸುತ್ತಿದ್ದಂತೇ, ನಿಮ್ಮ ಕಾರ್ಯಹಾಳೆ ಅಥವಾ ಟಿಪ್ಪಣಿ ಪುಸ್ತಕದಲ್ಲಿ ಕ್ರಮಸಂಖ್ಯೆಯೊಂದಿಗೆ ಬರೆಯಿರಿ ಅಥವಾ ಕಾರ್ಯಹಾಳೆಯಲ್ಲಿ ಗುರುತಿಸಿ.

೧. ನಿಮ್ಮ ಗಿಡಕ್ಕೆ ಒಂದು ಸ್ಥಳವನ್ನು ಗುರುತಿಸಿ. ಸ್ಥಳದ ಅಭಾವವಿದ್ದರೆ ಗಿಡವನ್ನು ಒಂದು ಧಾರಕದಲ್ಲಿ ನೆಡಿ. ಕುಂಡ, ಮೊಟ್ಟೆಯ ಚಿಪ್ಪು ಅಥವಾ ಯಾವುದಾದರೂ ಹಳೆಯ ಜಾಡಿಯೂ ಆಗಬಹುದು. ☐

ನೀವು ಗಿಡಗಳನ್ನು ಇವುಗಳಲ್ಲಿ ಬೆಳೆಸಬಹುದು:



ಅ. ಸುಲಭವಾಗಿ ಸಿಗುವ ಕುಂಡಗಳು



ಆ. ಉಪಯೋಗಿಸಲಾದ ಪ್ಲಾಸ್ಟಿಕ್



ಇ. ಬಳ್ಳಿಗಳನ್ನು ಮನೆಯ ತಾರಸಿ



ಈ. ಮೊಟ್ಟೆಚಿಪ್ಪು/ಸಿಪ್ಪೆ ಮೊಳಕೆ ಗಿಡಗಳು.



ಉ. ತೆಂಗಿನ ಚಿಪ್ಪು



ಊ. ಹಳೆಯ ಬಾಲ್ದಿಗಳು ಅಥವಾ ಇತರ ಯಾವುದಾದರೂ ಕರಡಿಗೆಗಳು

೨. ನಿಮ್ಮ ಕುಟುಂಬದ ಯಾರಾದರೂ ಸದಸ್ಯರ ಸಹಾಯದೊಂದಿಗೆ ಈ ಕೋಷ್ಟಕವನ್ನು ತುಂಬಿಸಿ.

| ಕಾಲ | ನಾನು ಬೀಜ ಬಿತ್ತಬಹುದಾದ ಗಿಡ (ತರಕಾರಿ, ಗಿಡಮೂಲಿಕೆ) | ಅದು ಬೆಳೆಯಲು ಎಷ್ಟು ಸಮಯ ಬೇಕಾಗುತ್ತದೆ? |
|---|---|---|
| ಬೇಸಿಗೆ | | |
| ಮಳೆಗಳ | | |
| ಚಳಿಗಾಲ | | |

೩. ನಿಮ್ಮ ಸ್ಥಳವನ್ನು ಸಿದ್ಧಗೊಳಿಸಿ ಹಾಗೂ ನಿಮ್ಮ ಮನೆಯವರೊಂದಿಗೆ ಸೇರಿ ಅದನ್ನು ನೆಡಲು ಪ್ರಾರಂಭಿಸಿ. ☐

೪. ಅದು ಸಂಪೂರ್ಣ ಬೆಳೆದ ನಂತರ, ನಿಮ್ಮ ಗಿಡವು ಹೇಗೆ ಕಾಣುತ್ತದೆಂದು ಚಿತ್ರಬಿಡಿಸಿ.

# ವೀಡಿಯೊ ವಿಖಬಿ

## ವೀಡಿಯೋದ ಸಮಯ
## ಕಸದ ಮಾತಾಡೋಣ!

ವೀಡಿಯೋ ವಿಖಬಿ: ಕಸದ ಮಾತಾಡೋಣ!
ಅತೀಕಡಿಮೆ ತ್ಯಾಜ್ಯ ಉಂಟು ಮಾಡುವುದು ಹೇಗೆಂದು ಈ ವೀಡಿಯೋದಿಂದ ಕಲಿಯೋಣ.





# ಕಾರ್ಯಹಾಳೆ


ಡಬ್ಲ್ಯುಡಿಬಿ

## ನಾನು ಜವಾಬ್ದಾರ

ನಿಮ್ಮ ಮನೆಯಲ್ಲಿ ಉತ್ಪಾದಿಸಲಾಗುವ ವಿವಿಧ ರೀತಿಯ ತ್ಯಾಜ್ಯಗಳ ಕ್ರಮಸಂಖ್ಯೆಯನ್ನು ಬರೆಯಿರಿ ಅಥವಾ ಗುರುತಿಸಿ.



೧. ತರಕಾರಿ ಮತ್ತು ಹಣ್ಣುಗಳ ಸಿಪ್ಪೆಗಳು



೨. ಉಳಿದ ಆಹಾರ



೩. ಬಿದ್ದಿರುವ ಎಲೆಗಳು


೪. ಒಡೆದ ಗಾಜುಗಳು


೫. ಬಟ್ಟೆ ಒಗೆಯಲು ಉಪಯೋಗಿಸಿದ ನೀರು



೬. ಹಳೆಯ ವೃತ್ತಪತ್ರಿಕೆಗಳು


೭. ಮುರಿದ ಪೀಠೋಪಕರಣಗಳು


೮. ಮುರಿದ ಆಟಿಕೆಗಳು


೯. ಕೆಟ್ಟುಹೋದ ಹಣ್ಣುಗಳು ಮತ್ತು ತರಕಾರಿಗಳು


೧೦. ಪ್ಲಾಸ್ಟಿಕ್ ಬಾಟಲಿಗಳು / ಜಾಡಿಗಳು




೧೧. ಪ್ಲಾಸ್ಟಿಕ್ ಲಕೋಟೆಗಳು/ ಚೀಲಗಳು



೧೨. ಉಪಯೋಗಿಸಿದ ಟಿಪ್ಪಣಿ ಪುಸ್ತಕಗಳು

ಇದೀಗ ಚಿಕ್ಕದೊಂದು ಕೆಲಸ ಮಾಡೋಣ! ಕೆಳಗೆ ಕೊಟ್ಟಿರುವ ಕ್ರಮಗಳನ್ನು ಅನುಸರಿಸಿ –

೧. ಮನೆಯಲ್ಲಿರುವ ಹಳೆಯ ಬಕೆಟ್ ಬಳಸಿ ಎರಡು ಕಸದಬುಟ್ಟಿಗಳನ್ನು ಸಿದ್ಧಗೊಳಿಸಿ. ಒಂದು ಒಣ ಕಸಕ್ಕೆ, ಇನ್ನೊಂದು ಹಸಿ ಕಸಕ್ಕೆ.

೨. ನಿಮ್ಮ ಟಿಪ್ಪಣಿ ಪುಸ್ತಕದಲ್ಲಿ ಕೆಳಗೆ ನೀಡಿರುವ ಚಿತ್ರವನ್ನು ಬರೆಯಿರಿ. ವಿವಿಧ ತ್ಯಾಜ್ಯವನ್ನು ಒಣ ಕಸ ಮತ್ತು ಹಸಿಕಸ ಎಂದು ವಿಂಗಡಿಸಿ. ಉಲ್ಲೇಖಕ್ಕಾಗಿ ಮೇಲೆ ನೀಡಿರುವ ಪಟ್ಟಿಯನ್ನು ಉಪಯೋಗಿಸಿ.



## ನೆನಪಿರಲಿ

- ಒಣ ಕಸವನ್ನು ಮರುಸಂಸ್ಕರಿಸಬಹುದು.
- ಹಸಿ ಕಸವನ್ನು ನಿಮ್ಮ ಗಿಡಗಳಿಗೆ ಪೋಷಕಾಂಶ ನೀಡುವ ಗೊಬ್ಬರವನ್ನು ತಯಾರಿಸಲು ಬಳಸಬಹುದು.
- ನಮ್ಮ ಮನೆಯ ಕೆಲವು ತ್ಯಾಜ್ಯಗಳು ಬಹಳ ಅಪಾಯಕಾರಿಯಾಗಿವೆ.

ಈ ಕೆಳಗಿನವುಗಳ ಬಗ್ಗೆ ಎಚ್ಚರಿಕೆಯಿಂದಿರಿ:

| | | |
|---|---|---|
| ಅಳಿದುಳಿದ ವರ್ಣದ್ರವ್ಯ (ಪೆಯಿಂಟ್) | ಉಪಯೋಗಿಸಿದ ಬ್ಯಾಟರಿಗಳು | ನೈರ್ಮಲ್ಯಕ್ಕೆ ಸಂಬಂಧಿಸಿದ ತ್ಯಾಜ್ಯ |
| ರಾಸಾಯನಿಕ ಗೊಬ್ಬರಗಳು | ಸ್ವಚ್ಛತೆಗೆ ಸಂಬಂಧಿಸಿದ ದ್ರವ್ಯಗಳು | ಕೀಟನಾಶಕಗಳು |
| ಕೆಟ್ಟುಹೋದ ವಿದ್ಯುತ್ ಉಪಕರಣಗಳು | ವಾಹನದ ತೈಲಗಳು | ವಾಯಿದೆ ಮುಗಿದ ಔಷಧಿಗಳು |

- ಅಪಾಯಕರ ತ್ಯಾಜ್ಯವನ್ನು ನೀರಿನ ಮೂಲದ ಬಳಿಯಲ್ಲಿ ಎಸೆಯಬಾರದು.
- ನೀವು ವಿಂಗಡಿಸಿದ ತ್ಯಾಜ್ಯಕಸವು ಸೂಕ್ತ ವ್ಯಕ್ತಿಗಳ ಕೈ ಸೇರಿದೆ ಎಂದು ಖಚಿತ ಪಡಿಸಿಕೊಳ್ಳಿ.

## ವೀಡಿಯೋ ವೀಕ್ಷಿಸಿ:

### ಪ್ರಕೃತಿಯ ಮರುಸಂಸ್ಕರಣಾಕಾರರು

ಗೊಬ್ಬರದ ಬಗ್ಗೆ ತಿಳಿದುಕೊಳ್ಳಿ ಮತ್ತು ಅದನ್ನು ನೀವು ಮನೆಯಲ್ಲಿ ಹೇಗೆ ಮಾಡಬಹುದೆಂದು ಕಲಿಯಿರಿ.




# ಕಾರ್ಯಹಾಳೆ

ಡಬ್ಲ್ಯೂಇಸಿ

## ನನ್ನ ಹಿತ್ತಲಿನಲ್ಲಿ ಚಮತ್ಕಾರ

### ಕೆಳಗೆ ನೀಡಿರುವ ಸೂಚನೆಯಂತೆ ಮನೆಯಲ್ಲಿ ಒಂದು ಗೊಬ್ಬರದ ಗುಂಡಿಯನ್ನು ಸಿದ್ಧಗೊಳಿಸಿ:




### ನೆನಪಿನಲ್ಲಿಡಬೇಕಾದ ಅಂಶಗಳು:

೧. ಅದರಲ್ಲಿ ಗಾಳಿಯಾಡಬೇಕಾಗಿರುವುದು ಅತ್ಯಗತ್ಯವಾಗಿದೆ.





೨. ಗೊಬ್ಬರದಲ್ಲಿ ತುಂಬಾ ನೀರಿನಂಶವಿರಲು ಬಿಡಬೇಡಿ.

೩. ತೊಟ್ಟಿಯ ಸುತ್ತಲೂ ರಂಧ್ರಗಳಿರಬೇಕು.

೪. ವಾರಕ್ಕೊಮ್ಮೆ ಗೊಬ್ಬರವನ್ನು ಕೋಲಿನಲ್ಲಿ ಅಥವಾ ಮುಳ್ಳುಹಿಡಿಕೆಯಲ್ಲಿ ಕೆದಕಿ ತಿರುವಿ.

೫. ನೀರಿನಂಶ ಹೆಚ್ಚಾದಾಗ ವೃತ್ತಪತ್ರಿಕೆ, ಮರದ ಪುಡಿ/ಹೊಟ್ಟು ಅಥವಾ ಒಣ ಎಲೆಗಳನ್ನು ಸೇರಿಸಿ.

೬. ಲಾರ್ವಾ/ಮರಿಹುಳುಗಳನ್ನು ನೋಡಿ ಭಯ ಪಡಬೇಡಿ. ಗೊಬ್ಬರದ ಪ್ರಕ್ರಿಯೆಯಲ್ಲಿ ಇವುಗಳ ಸಹಾಯ ಮಾಡುತ್ತವೆ.

| ಗೊಬ್ಬರದ ತೊಟ್ಟಿಗೆ ಯಾವುದನ್ನು ಹಾಕಬಹುದು | | ಗೊಬ್ಬರದ ತೊಟ್ಟಿಗೆ ಯಾವುದನ್ನು ಹಾಕ ಬಾರದು | |
|---|---|---|---|
|  | ಆಹಾರದ ತುಣುಕುಗಳು, ಚಹಾದ ಎಲೆಗಳು, |  | ಎಲುಬುಗಳು, |
|  | ಹೂವುಗಳು, ಕಡ್ಡಿಗಳು |  | ಮಾಂಸ, ಪ್ರಾಣಿ ತ್ಯಾಜ್ಯ |
|  | ಒಣ ಎಲೆಗಳು |  | ರೋಗಪೀಡಿತ ಗಿಡಗಳು |




# ಕಾರ್ಯಹಾಳೆ








ಡಬ್ಲ್ಯುಇಡಿ

## ನಮ್ಮ ಮನೆಯನ್ನು ಹಸಿರು ಮನೆಯಾಗಿಸೋಣ!

ಈ ಕೆಳಗಿನ ಹಸಿರು ಅಭ್ಯಾಸಗಳು ನಮ್ಮ ಪರಿಸರಕ್ಕೆ ಒಳ್ಳೆಯದು. ೫ ಆರ್ ಗಳನ್ನು ನೆನಪಿಟ್ಟುಕೊಳ್ಳುವ ಮೂಲಕ ನೀವು ಅವುಗಳನ್ನು ನೆನಪಿಟ್ಟುಕೊಳ್ಳಬಹುದು.



ಕೆಳಗೆ ನೀಡಿರುವ ಕೋಷ್ಟಕವನ್ನು ಬಿಡಿಸಿಕೊಂಡು ನಿಮ್ಮ ಮನೆಯವರೊಂದಿಗೆ ಒಂದು ಸಣ್ಣ ಮಾತುಕತೆ ನಡೆಸಿ. ಮನೆಯ ಎಲ್ಲಾ ಸದಸ್ಯರಿಗೂ ಅವರವರ ಅಭ್ಯಾಸಗಳನ್ನು ಒಂದು ವಾರದವರೆಗೆ ಗಮನದೊಂದಿಗೆ ಕೈಗೊಳ್ಳಲು ಹೇಳಿ. ವಾರದ ಕೊನೆಯಲ್ಲಿ, ಅಭ್ಯಾಸಗಳನ್ನು ಕಾರ್ಯಗತಗೊಳಿಸಿದ್ದರೆ, ಪ್ರತಿಯೊಬ್ಬ ಸದಸ್ಯರಿಗೂ ಕೋಷ್ಟಕದಲ್ಲಿ ನಕ್ಷತ್ರಾಂಕಗಳನ್ನು ನೀಡಿ.

| ಅಭ್ಯಾಸಗಳು | ವಾರ ೧ | ವಾರ ೨ | ವಾರ ೩ | ವಾರ ೪ |
|---|---|---|---|---|
|  ಮಾರುಕಟ್ಟೆಯ ಸಿದ್ಧ ಪೊಟ್ಟಣ ಆಹಾರದ ಬಳಕೆ ದೂರವಿರಿಸಿರುವುದು. | | | | |
|  ಬಳಕೆಯಲ್ಲಿಲ್ಲದಾಗ ದೀಪ ಮತ್ತು ಪಂಕ (ಫ್ಯಾನ್) ಗಳನ್ನು ಆರಿಸಿರುವುದು. | | | | |
|  ಗಿಡವನ್ನು ಕಾಳಜಿಯಿಂದ ನೋಡಿಕೊಂಡಿರುವುದು. | | | | |
|  ಮರ ಮತ್ತು ಪ್ರಾಣಿಯನ್ನು ವೀಕ್ಷಿಸಿರುವುದು. | | | | |
|  ಮಾರುಕಟ್ಟೆಗೆ ಸ್ವಂತ ಚೀಲವನ್ನು ಕೊಂಡೊಯ್ದಿರುವುದು. | | | | |
|  ಸೋರುತ್ತಿರುವ ನಲ್ಲಿಯನ್ನು ಸರಿ ಪಡಿಸಿರುವುದು. | | | | |
|  ನೀರನ್ನು ಮರುಬಳಸಿರುವುದು. | | | | |
|  ಒಂದು ತರಕಾರಿ ಗಿಡ/ಗಿಡಮೂಲಿಕೆಯನ್ನು ಬೆಳೆಸಿರುವುದು. | | | | |
|  ಮನೆಗೆ ಯಾವುದೇ ಪ್ಲಾಸ್ಟಿಕ್ ವಸ್ತು ತರದಿರುವುದು. | | | | |
|  ಋಊಡಿಜಚಿಣಜಜ ಞಾಜ ತಿಚೆಣಜ | | | | |

ಈ ಕೆಳಗಿನವುಗಳನ್ನು ನಿಮ್ಮ ಮನೆಯವರೊಂದಿಗೆ ಚರ್ಚಿಸಿ.

- ನಕ್ಷತ್ರಾಂಕ ಪಡೆಯದಿರುವ ಯಾವುದಾದರೂ ಚೌಕಟ್ಟಿದೆಯೇ – ಹೌದು/ಇಲ್ಲ
- ಇಲ್ಲವೆಂದಾದರೆ, ಅದು ಯಾವುದು?


____________________

- ವಾರದಲ್ಲಿ ನಕ್ಷತ್ರಾಂಕಗಳ ಸಂಖ್ಯೆ ಹೆಚ್ಚಾಗಿದೆಯೇ ಅಥವಾ ಕಡಿಮೆಯಾಗಿದೆಯೇ?

____________________

# ಪರಿಸರ–ಸ್ನೇಹೀ ಮನೆಯ ತಪಶೀಲುಪಟ್ಟಿ

## ನೀರು



೧. ಸೋರುತ್ತಿರುವ ನಲ್ಲಿಯನ್ನು ನಾವು ಒಂದೇ ದಿನದೊಳಗೆ ಸರಿಪಡಿಸುತ್ತೇವೆ.




೨. ಸ್ನಾನ ಮಾಡಲು ಬಾಲ್ದಿಯನ್ನು ಬಳಸುತ್ತೇವೆ.




೩. ನೆಲ/ವಾಹನವನ್ನು ಸ್ವಚ್ಛಗೊಳಿಸಲು ಬಟ್ಟೆ ಒಗೆದ ನೀರನ್ನು ಮರುಬಳಸುತ್ತೇವೆ.




೪. ಆನಂತರ ಬಳಸಲೆಂದು ಮುಚ್ಚಳವಿರುವ ಪಾತ್ರೆಯಲ್ಲಿ ಮಳೆಯ ನೀರನ್ನು ಸಂಗ್ರಹಿಸಿ ಇಟ್ಟುಕೊಳ್ಳುತ್ತೇವೆ.



೫. ತರಕಾರಿಯನ್ನು ನಲ್ಲಿ ನೀರು ಬಿಟ್ಟುಕೊಂಡು ತೊಳೆಯುತ್ತೇವೆ.



೬. ಗಿಡಗಳಿಗೆ ಅಗತ್ಯವಿದ್ದಾಗ ಮಾತ್ರ ನೀರುಣಿಸುತ್ತೇವೆ.



೭. ಗಿಡಗಳಿಗೆ ಮುಂಜಾನೆ ಅಥವಾ ಸಾಯಂಕಾಲ ನೀರನ್ನು ಹಾಕುತ್ತೇವೆ.


## ಆಹಾರ




೧. ನಾವು ತಿನ್ನುವಂಥಾ ಕೆಲವು ಆಹಾರವನ್ನು ನಾವೇ ಬೆಳೆಸುತ್ತೇವೆ.



೨. ಸ್ಥಳೀಯವಾಗಿ ಬೆಳೆಯಲಾಗಿರುವ ಹಣ್ಣು ಮತ್ತು ತರಕಾರಿಗಳನ್ನು ತಿನ್ನುತ್ತೇವೆ.




೩. ವ್ಯರ್ಥವಾಗುವುದನ್ನು ತಪ್ಪಿಸಲು ನಮ್ಮ ಆಹಾರವನ್ನು ಜಾಗ್ರತೆಯಾಗಿ ಇಡುತ್ತೇವೆ.




೪. ಮನೆಯಲ್ಲಿಯೇ ಉಪ್ಪಿನಕಾಯಿ ಮತ್ತು ಹಣ್ಣಿನಪಾಕ (ಜ್ಯಾಮ್) ತಯಾರಿಸುತ್ತೇವೆ.



೫. ತಾಜಾ ಅಡುಗೆಯನ್ನು, ಬೇಕಾದಷ್ಟೇ ಪ್ರಮಾಣದಲ್ಲಿ ಮಾಡುತ್ತೇವೆ.



೬. ಆಹಾರದ ತುಣುಕುಗಳನ್ನು ಗೊಬ್ಬರಕ್ಕೆ ಬಳಸುತ್ತೇವೆ.



೭. ನಮಗೆ ತಿನ್ನಲು ಏನು ಮತ್ತು ಎಷ್ಟು ಬೇಕು ಎಂದು ಅಂದಾಜಿಸಿ ಊಟ ತಯಾ-ರಿಸುತ್ತೇವೆ.

## ತ್ಯಾಜ್ಯ




೧. ನಾವು ಹಸಿ ಮತ್ತು ಒಣ ತ್ಯಾಜ್ಯಗಳನ್ನು ಬೇರೆಬೇರೆ ಇಡುತ್ತೇವೆ.



೨. ನಮ್ಮ ಕೈತೋಟಕ್ಕೆ ನಾವೇ ತಯಾರಿಸಿದ ಗೊಬ್ಬರ ಬಳಸುತ್ತೇವೆ.



೩. ಖರೀದಿಗೆ ಹೋಗುವಾಗ ಯಾವಾಗಲೂ ನಮ್ಮದೇ ಚೀಲವನ್ನು ಒಯ್ಯುತ್ತೇವೆ.



೪. ಮನೆಗೆ ಹೊಸ ವಸ್ತು ಖರೀದಿಸುವ ಮೊದಲು ನಾವು ಆಲೋಚಿಸುತ್ತೇವೆ.



೫. ವಿಪರೀತ ಪ್ಲಾಸ್ಟಿಕ್ ಹೊಂದಿರುವ ವಸ್ತುಗಳ ಖರೀದಿಯನ್ನು ದೂರವಿಡುತ್ತೇವೆ.



೬. ಜಾಡಿಗಳು ಮತ್ತು ಕರಡಿಗೆಗಳನ್ನು ನಾವು ಮರುಬಳಸುತ್ತೇವೆ.



೭. ಮನೆಯ ವಸ್ತುಗಳನ್ನು ನಾವು ದುರಸ್ತಿಗೊಳಿಸುತ್ತೇವೆ.

ನಿಮ್ಮ ಮನೆಯನ್ನು ಹಸಿರು ಮನೆಯಾಗಿಸುವುದಕ್ಕೆ ನೀವು ಕೈಗೊಂಡಿರುವ ಬದಲಾವಣೆ ಮೌಲ್ಯಮಾಪನ ಮಾಡೋಣ. ಈ ಮೂರೂ ಗುಂಪುಗಳಲ್ಲಿ ನೀವು ಎಷ್ಟು ವಿಷಯಗಳನ್ನು ಆಯ್ಕೆ ಮಾಡಿದ್ದೀರೆಂದು ಲೆಕ್ಕ ಮಾಡಿ.

ನಿಮ್ಮ ಹೊಸ ಅಂಕಗಳನ್ನು ಹಂತ ೨ ರಲ್ಲಿ ನಿಮಗೆ ಸಿಕ್ಕದ ಅಂಕಗಳೊಡನೆ ಹೋಲಿಸಿ.

| ಅಂಕ | ನೀರು | ಆಹಾರ | ತ್ಯಾಜ್ಯ |
|---|---|---|---|
| ಕಾರ್ಯಹಾಳೆ ಡಬ್ಲ್ಯು೨ಬಿ ಪ್ರಕಾರ ಹಳೆಯ ಅಂಕ | | | |
| ಕಾರ್ಯಹಾಳೆ ಡಬ್ಲ್ಯು೨ಬಿ ಪ್ರಕಾರ ಹಳೆಯ ಅಂಕ | | | |

ನಿಮ್ಮ ಹಸಿರು ಅಂಕಪಟ್ಟಿ ಸುಧಾರಿಸಿದೆಯೇ? ಯಾಕೆ?

# ವೀಡಿಯೊ ವಿಝಡಿ

## ವೀಡಿಯೋದ ಸಮಯ!
## ನೀವೇ "ಒಂದು ಭೂಮಿ ಒಂದು ಮನೆ" ಮಾಡಿ

**ಒಂದು ಭೂಮಿ ಒಂದು ಮನೆಯ ಮೂರು ಹಂತಗಳು ಪೂರ್ಣಗೊಂಡಿವೆ! ಈಗ ಆಚರಿಸಲು ಸಮಯ. ಈ ವೀಡಿಯೊವನ್ನು ಅನುಸರಿಸಿ ಮತ್ತು ನಿಮ್ಮ ಮನೆಯನ್ನು ಧ್ವಜ ಅಥವಾ ಬಣ್ಣದ ಕಾಗದದಿಂದ ಅಲಂಕರಿಸಿ**




# ಬನ್ನಿ ಸಂಭ್ರಮಿಸೋಣ!

## ಒಂದು ಹಸಿರು ಮನೆಯ ಸಂಕೇತವನ್ನು ತಯಾರಿಸಿ!


ಕೇವಲ ಹಳೆಯ ವಸ್ತುಗಳನ್ನು ಬಳಸಿ, ಒಂದು ಧ್ವಜ/ಬಾವುಟ ಅಥವಾ ತೋರಣದಂಥಾ ಒಂದು ಸಂಕೇತವನ್ನು ಮಾಡಿ ಮತ್ತು ಅದನ್ನು ನಿಮ್ಮ ಮನೆಯ ಹೊರಗಡೆ ತೂಗುಹಾಕಿ.

ಈಗ ನಿಮ್ಮ ಮನೆ ಒಂದು ಹಸಿರು ಮನೆ ಎಂಬುದನ್ನು ನಿಮ್ಮ ಸಂಕೇತವು ಪ್ರದರ್ಶಿಸುವಂತಿರಬೇಕು. ಉದಾಹರಣೆಗೆ, ಒಂದು ಮರ, ಒಂದು ಹಸಿರು ಕೈಗುರುತು ಅಥವಾ ಭೂಮಿಯನ್ನು ಹಿಡಿದಿರುವ ಕೈಗಳು ಇತ್ಯಾದಿ.


### ಧ್ವಜದ/ಬಾವುಟದ ಮಾದರಿ




ಹಂತ ೧ – ಯಾವುದಾದರೂ ಹಳೆಯ ಬಟ್ಟೆಯನ್ನು ತೆಗೆದುಕೊಳ್ಳಿ.




ಹಂತ ೨ – ಅದನ್ನು ತ್ರಿಕೋನಾಕಾರದಲ್ಲಿ ಕತ್ತರಿಸಿ.




ಹಂತ ೩ – ಆ ತ್ರಿಕೋನಾಕಾರದ ಬಟ್ಟೆಯ ಮೇಲೆ ವಸ್ತ್ರ ವರ್ಣದ್ರವ್ಯ (ಬಟ್ಟೆ ಪೆಯಿಂಟ್) ಬಳಸಿ ನಿಮ್ಮ ಸಂಕೇತವನ್ನು ಬಿಡಿಸಿ.



ಹಂತ ೪ – ಆನಂತರ ಒಂದು ಕೋಲನ್ನು ತೆಗೆದುಕೊಳ್ಳಿ.




ಹಂತ ೫ – ಮೇಲೆ ವಿವ–ರಿಸಿದಂತೆ ಮಡಚಿದ ಭಾಗಕ್ಕೆ ವಸ್ತ್ರದ ಅಂಟನ್ನು ಹಾಕಿ ಅಂಟಿಸಿ.




ಹಂತ ೬ – ಇದೀಗ ನಿಮ್ಮ ಧ್ವಜ/ಬಾವುಟ ಸಿದ್ಧವಾಗಿದೆ.


### ತೋರಣದ ಮಾದರಿ



ಹಂತ ೧ – ಯಾವುದಾದರೂ ಹಳೆಯ ದೊಡ್ಡ ಬಟ್ಟೆಯನ್ನು ತೆಗೆದುಕೊಳ್ಳಿ.




ಹಂತ ೨ – ಅದನ್ನು ೫ ರಿಂದ ೬ ತ್ರಿಕೋನಾಕರದ ತುಂಡುಗಳನ್ನಾಗಿ ಕತ್ತರಿಸಿ.




ಹಂತ ೩ – ಆ ತ್ರಿಕೋನಾಕಾರದ ಎಲ್ಲಾ ಬಟ್ಟೆಗಳ ಮೇಲೆ ವಸ್ತ್ರ ವರ್ಣದ್ರವ್ಯ (ಬಟ್ಟೆ ಪೆಯಿಂಟ್) ಬಳಸಿ ನಿಮ್ಮ ಸಂಕೇತವನ್ನು ಬಿಡಿಸಿ.



ಹಂತ ೪ – ಆನಂತರ, ಒಂದು ಲಾಡಿ ಅಥವಾ ಬಟ್ಟೆಯ ದಾರವನ್ನು ತೆಗೆದುಕೊಳ್ಳಿ.



ಹಂತ ೫ – ಮೇಲೆ ವಿವ–ರಿಸಿದಂತೆ ಎಲ್ಲಾ ಬಟ್ಟೆ ತುಂಡುಗಳ ಮಡಚಿದ ಭಾಗಕ್ಕೆ ವಸ್ತ್ರದ ಅಂಟನ್ನು ಹಾಕಿ ಸ್ವಲ್ಪ ಅಂತರವನ್ನಿಟ್ಟು ಅಂಟಿಸಿ.



ಹಂತ ೬ – ಕೊನೆಗೂ ನಿಮ್ಮ ತೋರಣ ಸಿದ್ಧವಾಗಿದೆ.

# ಹಸಿರು ಕುಟುಂಬದ ಪ್ರತಿಜ್ಞೆ

'ಒಂದು ಭೂಮಿ – ಒಂದು ಮನೆ' ಚಟುವಟಿಕೆಗಳನ್ನು ಸಂಪೂರ್ಣಗೊಳಿಸಿದ್ದಕ್ಕಾಗಿ ನಿಮಗೆ ಅಭಿನಂದನೆಗಳು!

ನಿಮ್ಮ ಮನೆಯನ್ನು ಹಸಿರು ಮನೆ ಹಾಗೂ ಕುಟುಂಬವನ್ನು ಹಸಿರು ಕುಟುಂಬವನ್ನಾಗಿ ಮುಂದುವರಿಸುತ್ತೀರೆಂದು ನಿಮಗೆ ನೀವೇ ಪ್ರತಿಜ್ಞೆ ಮಾಡಿಕೊಳ್ಳಿ. ಈ ಕೆಳಗಿನ ಪ್ರತಿಯೊಂದು ಕ್ಷೇತ್ರಗಳಲ್ಲೂ ನೀವು ಎಂದಿಗೂ ಕುಟುಂಬ ಸಮೇತವಾಗಿ ಮುಂದುವರಿಸುವಂಥಾ ಒಂದು ವಿಷಯವನ್ನು ಬರೆಯಿರಿ ಹಾಗೂ ಅದರ ಕೆಳಭಾಗದಲ್ಲಿ ಮನೆಯವರೆಲ್ಲರೂ ತಮ್ಮ ಹೆಸರಿನೊಂದಿಗೆ ಸಹಿ ಮಾಡಬಹುದು. ಅದನ್ನು ನಿಮ್ಮ ಮನೆಯಲ್ಲಿ ಎಲ್ಲರಿಗೂ ಕಾಣಿಸುವಂತೆ ಇರಿಸಿ.

| ಈ ಕೆಳಗಿನ ವಿಷಯಗಳಲ್ಲಿ ನಾವು ನಮ್ಮ ಮನೆಯನ್ನು ಹಸಿರು ಮನೆ ಹಾಗೂ ಕುಟುಂಬವನ್ನು ಹಸಿರು ಕುಟುಂಬವನ್ನಾಗಿ ಮುಂದುವರಿಸುತ್ತೇವೆ. | |
|---|---|
| ಸುತ್ತಮುತ್ತಲಿನ ಸಸ್ಯ ಮತ್ತು ಪ್ರಾಣಿಗಳು | |
| ನೀರು | |
| ಆಹಾರ | |
| ತ್ಯಾಜ್ಯ | |

| ಹೆಸರು | ಮಗುವಿನೊಡನೆ ಇರುವ ಸಂಬಂಧ | ಸಹಿ/ಹೆಬ್ಬೆಟ್ಟು ಮುದ್ರೆ |
|---|---|---|
| | | |
| | | |
| | | |
| | | |

## ಮರುಮನನದ ಸಮಯ!

ಅಭಿನಂದನೆಗಳು! ಈಗ ನೀವು ೩ನೆಯ ಹಂತವನ್ನು ಪೂರ್ಣಗೊಳಿಸಿದ್ದೀರಿ.
ನಾವು ಇಲ್ಲಿಯವರೆಗೆ ಏನನ್ನು ಕಲಿತಿದ್ದೇವೆ ನೋಡೋಣ!

**೧.** ೧. ನನಗೆ ಮೊದಲೇ ಗೊತ್ತಿದ್ದ ವಿಷಯಗಳು

**೨.** ೨. ನಾನು ಕಲಿತ ಹೊಸ ವಿಷಯಗಳು

ಹಂತ 3, ಪೂರ್ಣಗೊಂಡ ನಂತರ ಪಾಂಡಾ ಬಾಟ್ ನಿಮಗೆ 'ಒಂದು ಭೂಮಿ ಒಂದು ಮನೆ' ಬ್ಯಾಡ್ಜ್. ನೀಡಲು ಬಯಸಿದೆ. ಈ ಲಿಂಕ್‌ನಿಂದ ಬ್ಯಾಡ್ಜ್ ಅನ್ನು ಇದೀಗ ಡೌನ್‌ಲೋಡ್ ಮಾಡಿ:

https://www.wwfindia.org/about_wwf/environmental_education/one_earth_one_home/step_three_badge.cfm

